**<u>ದಿನಾಂಕ 17.07.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಶ್ರೀ ಎಸ್. ಎನ್ ವಕೀಲರಿಂದಃ</u>**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿರುತ್ತದೆ. ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ನನ್ನ ದಾವೆಯ ಜೊತೆಗೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

ದಿಃ 19-11-1991 ರ ನಿವೇಶನದ ಹಕ್ಕು ಪತ್ರವನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು.ದಿಃ 24-05-2012 ರ ನೋಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ದಿಃ 21-08-2013 ರ ನೋಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ದಾವಾಸ್ತಿಗೆ ಸಂಬಂಧಿಸಿದ ಆಸ್ತಿತೆರಿಗೆ ರಿಜಿಸ್ಟರ್ ನ ದೃ. ನಕಲನ್ನು ನಿಪಿ 4 ಎಂದು ಗುರುತಿಸಲಾಯಿತು. ದಿಃ 10-10-2014 ಮೂಲ ಕ್ರಯಪತ್ರದ ಮೊದಲ ಮತ್ತು ಕೊನೆಯ ಪುಟವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ದಿಃ 10-1-2014 ರ ನೋಂದಾಯಿತ ಕ್ರಯಪತ್ರದ ದೃ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ದಾವಾಸ್ತಿಗೆ ಸಂಬಂಧಿಸಿದ ಆಸ್ತಿತೆರಿಗೆ ರಿಜಿಸ್ಟರ್ ನ ದೃ. ನಕಲನ್ನು ನಿಪಿ 7 ಎಂದು ಗುರುತಿಸಲಾಯಿತು. ದಾವಾ ಸಂಖ್ಯೆಃ 291/2013 ರ ಆದೇಶದ ಪ್ರತಿಯ ದೃಢೀಕೃತ ನಕಲನ್ನು ಹಾಜರುಮಾಡಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ದಾವಾ ಸಂಖ್ಯೆಃ 291/2013 ವಾದ ಪತ್ರಹಾಗೂ ಮೌಲ್ಯ ನಿರ್ಧರಣಾ ಪಟ್ಟಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ 9 ಮತ್ತು 10 ಎಂದು ಗುರುತಿಸಲಾಯಿತು. ದಾವಾ ಸಂಖ್ಯೆಃ 291/2013 ರ ತೀರ್ಪು ಮತ್ತು ಡಿಕ್ರಿಯನ್ನು ಹಾಜರುಮಾಡಿದ್ದು ಅದನ್ನು ನಿಪಿ 11 ಎಂದು ಗುರುತಿಸಲಾಯಿತು. ದಾವಾ ಸಂಖ್ಯೆಃ 291/2013 ರಲ್ಲಿ

ವಾದಿಯು ನೀಡಿದ ಸಾಕ್ಷಿಃ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ 12 ಎಂದು ಗುರುತಿಸಲಾಯಿತು. ಅದೇ ದಾವೆಯಲ್ಲಿ ಮಹಾದೇವ ಶೆಟ್ಟಿರವರು ನೀಡಿದ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 13 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತುಃ**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)*

ಓ ಹೇ ಕೇ ಸ ಇದೆ,

(ಸಂತೋಷ ಕೊಠಾರಿ)
ಅಪರ ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕೊಳ್ಳೇಗಾಲ.